# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 501 |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 22.12.2022 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿರವರು |


| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಬನಶಂಕರಿ 3ನೇ ಹಂತ ಮಂಜುನಾಥ ಕಾಲೋನಿ ಗುಡಿಸಲು ಪ್ರದೇಶದಲ್ಲಿ ನಿವೇಶನ ಸಂಖ್ಯೆ:75 ಮತ್ತು ನಿವೇಶನ ಸಂಖ್ಯೆ:74ರ ಖರೀದಿದಾರರು ಪ್ರಾಧಿಕಾರದ ಸುತ್ತೋಲೆಯಂತೆ ನಿವೇಶನ ಖರೀದಿಸಿ ಶುದ್ಧ ಕ್ರಯಪತ್ರ ಕೋರಿ ಮನವಿ ಸಲ್ಲಿಸಿದ್ದಾರೆಯೇ; | ನಿವೇಶನ ಸಂಖ್ಯೆ:74ರ ಖರೀದಿದಾರರು ಎನ್ನಲಾದ ಶ್ರೀಮತಿ ಉಮಾ ರವರು ಶುದ್ಧ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.<br>ನಿವೇಶನ ಸಂಖ್ಯೆ:75ಕ್ಕೆ ಸಂಬಂಧಿಸಿದಂತೆ ಮೂಲ ಹಂಚಿಕೆದಾರರಾದ ಶ್ರೀ ಎ.ಚಂದ್ರಶೇಖರ್ ರವರು ಮೃತರಾದ ಕಾರಣ ಅವರಿಂದ ನಿವೇಶನವನ್ನು ಅವರ ಪತ್ನಿ ಶ್ರೀಮತಿ ಅಂಜಲಿ ರವರ ಹೆಸರಿಗೆ ವರ್ಗಾವಣೆ ಮಾಡಿ ಶುದ್ಧಕ್ರಯ ಪತ್ರವನ್ನು ದಿನಾಂಕ:14.11.2008 ರಂದು ನೋಂದಾಯಿಸಲಾಗಿದೆ. (ಅನುಬಂಧದಲ್ಲಿ ಲಗತ್ತಿಸಿದೆ.) |
| ಆ) | ಸಲ್ಲಿಸಿದ್ದಲ್ಲಿ ಪ್ರಾಧಿಕಾರವು ಈವರೆಗೆ ಕೈಗೊಂಡಿರುವ ಕ್ರಮಗಳೇನು? | ಬನಶಂಕರಿ 3ನೇ ಹಂತ ಮಂಜುನಾಥ ಕಾಲೋನಿ ಸ್ಲಂ ಬಡಾವಣೆಯ ನಿವೇಶನ ಸಂಖ್ಯೆ:74 ಅನ್ನು ಶ್ರೀ ಬಸವಯ್ಯ ಎಂಬುವವರಿಗೆ ಹಂಚಿಕೆ ಮಾಡಿ ದಿನಾಂಕ:07.11.2008 ರಂದು ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರವನ್ನು ನೋಂದಾಯಿಸಿದ ನಂತರ ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ. ನಿಯಮಗಳ ಪ್ರಕಾರ ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರದಲ್ಲಿ ವಿಧಿಸಲಾದ ಷರತ್ತಿನಂತೆ ಈ ನಿವೇಶನವನ್ನು 10 ವರ್ಷಗಳ ಕಾಲ ಪರಭಾರೆ ಮಾಡಲು ಅವಕಾಶವಿರುವುದಿಲ್ಲ.<br>ಆದರೆ, ಶ್ರೀಮತಿ ಉಮಾ ಎಂಬುವವರು ಪ್ರಾಧಿಕಾರಕ್ಕೆ ಮನವಿಯೊಂದನ್ನು ಸಲ್ಲಿಸಿ, ನಿವೇಶನ ಸಂಖ್ಯೆ:74ಅನ್ನು ದಿನಾಂಕ:21.09.2012 ರಂದು ನೋಂದಣಿಯಾಗದ ಛಾಪಾ ಕಾಗದದ ಮೇಲೆ ಮೂಲ ಹಂಚಿಕೆದಾರರಾದ ಬಸವಯ್ಯ ರವರಿಂದ ಖರೀದಿಸಲಾಗಿದೆ ಎಂದು ಹೇಳಿಕೊಂಡು ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಿ, ಅವರ ಹೆಸರಿಗೆ ಶುದ್ಧಕ್ರಯಪತ್ರವನ್ನು ನೋಂದಾಯಿಸುವಂತೆ ಕೋರಿರುತ್ತಾರೆ.<br>ಈ ರೀತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯ ನಿರ್ಣಯ ಸಂಖ್ಯೆ:205/7 ದಿನಾಂಕ:03.09.2007 ರಂತೆ ತೆಗೆದುಕೊಂಡಿರುವ ತೀರ್ಮಾನದಲ್ಲಿ ಕೊಳಚೆ ನಿವೇಶನ ಹಂಚಿಕೆ ಪ್ರಕರಣಗಳಲ್ಲಿ ನೋಂದಾಯಿಸದ ಕರಾರು ಪತ್ರ, ಜಿಪಿಎ ಹಾಗೂ ದಾನ ಪತ್ರಗಳ ಮೂಲಕ ನಿವೇಶನ ಹೊಂದಿರುವ ಅನುಭವದಾರರಿಗೆ ಮೂಲ ಹಂಚಿಕೆದಾರರಿಂದ ನಿರಾಕ್ಷೇಪಣಾ ಪತ್ರ ತರಲು ಅಥವಾ ಮೂಲ ಹಂಚಿಕೆದಾರರು ಲಭ್ಯವಿಲ್ಲದಿದ್ದಲ್ಲಿ ಅಂತಹಃ ಪ್ರಕರಣದಲ್ಲಿ ಅರ್ಜಿದಾರರ ವೆಚ್ಚದಲ್ಲಿ ಪತ್ರಿಕಾ ಪ್ರಕಟಣೆ ನೀಡಿ ಈ ಪ್ರಕಟಣೆಗೆ ಯಾರಿಂದಲೂ ತಕರಾರು ಬಾರದಿದ್ದಲ್ಲಿ ನಿವೇಶನದ ಮೌಲ್ಯ ಹಾಗೂ ಕ್ರಯದ ಕರಾರು ಮೌಲ್ಯದ ಶೇ.25 ರಷ್ಟು ದಂಡವನ್ನು ವಿಧಿಸಿ ಶುದ್ಧ ಕ್ರಯ ಪತ್ರ ನೀಡಲು ತೀರ್ಮಾನಿಸಿರುತ್ತದೆ. |

| | | |
|---|---|---|
| | | ಈ ತೀರ್ಮಾನದ ಬೆಳಕಿನಲ್ಲಿ ಈ ಪ್ರಕರಣದಲ್ಲಿಯೂ ಸಹ ನೋಂದಣಿಯಾಗದ ಛಾಪಾ ಕಾಗದದ ಮೂಲಕ ನಿವೇಶನವನ್ನು ಸ್ವಾಧೀನ ಪಡೆಯಲಾಗಿದೆ ಎಂದು ಹೇಳಿಕೊಂಡ ಶ್ರೀಮತಿ ಉಮಾ ರವರ ಮನವಿಯ ಬಗ್ಗೆ ಕ್ರಮ ವಹಿಸಲು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ. ಇದಕ್ಕೆ ಎದುರಾಗಿ ಯಾವುದೇ ತಕರಾರುಗಳು ಸ್ವೀಕೃತವಾಗಿರುವುದಿಲ್ಲ.<br><br>ಆದರೆ, ಈ ಪ್ರಕರಣದ ಮೂಲ ಕಡತವನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ:-<br><br>1. ನಿವೇಶನ ಸಂಖ್ಯೆ:74 ಅನ್ನು ಮೂಲ ಹಂಚಿಕೆದಾರರಾದ ಶ್ರೀ ಬಸವಯ್ಯ ರವರಿಗೆ ಹಂಚಿಕೆ ಮಾಡಿದ್ದರೂ ಸಹ, ಶುದ್ಧಕ್ರಯ ಪತ್ರ ಕೋರಿರುವ ಶ್ರೀಮತಿ ಉಮಾ ರವರು ಸದರಿ ನಿವೇಶನದಲ್ಲಿ ಸುಮಾರು 30 ವರ್ಷಗಳಿಂದ ವಾಸವಿರುತ್ತೇವೆ ಎಂದು ಅರ್ಜಿ ನೀಡಿರುತ್ತಾರೆ. ಹಾಗಾದರೆ ಶ್ರೀ ಬಸವಯ್ಯ ಎಂಬ ವ್ಯಕ್ತಿ ಯಾರು ಎಂಬ ಬಗ್ಗೆ ಹಾಗೂ ಇವರಿಂದ ಹೇಳಿಕೆ ಪಡೆಯಲು ಪ್ರಾಧಿಕಾರಕ್ಕೆ ಕರೆತರುವಂತೆ ತಿಳಿಸಿದ್ದರೂ ಸಹ ಈ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.<br><br>2. ಮೂಲ ಹಂಚಿಕೆದಾರರಾದ ಶ್ರೀ ಬಸವಯ್ಯ ರವರಿಗೆ ನೋಂದಾಯಿಸಿರುವ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರದಲ್ಲಿ ನಿವೇಶನ ಸಂಖ್ಯೆ:74 ಅಳತೆ 4.45x5.90ಮೀಟರ್ ಒಟ್ಟು ವಿಸ್ತೀರ್ಣ 26.25ಚ.ಮೀ (283 ಚ.ಅಡಿಗಳು) ಆಗಿರುತ್ತದೆ. ಆದರೆ ಅರ್ಜಿದಾರರಾದ ಶ್ರೀಮತಿ ಉಮಾ ರವರು ಪ್ರಶ್ನಿತ ನಿವೇಶನದಲ್ಲಿ ಮನೆ ನಿರ್ಮಿಸಿರುವ ವಿಸ್ತೀರ್ಣವು 6.10x14.95 ಮೀ. ಒಟ್ಟು ವಿಸ್ತೀರ್ಣ 91.19 ಚ.ಮೀ (982 ಚ.ಅಡಿಗಳು) ಆಗಿರುತ್ತದೆ. ಇದು ನೋಂದಾಯಿಸಿ ಕೊಡಲಾದ ನಿವೇಶನದ ವಿಸ್ತೀರ್ಣಕ್ಕಿಂತ ಸುಮಾರು 64.94 ಚ.ಮೀಟರ್ (700 ಚ.ಅಡಿಗಳು) ಹೆಚ್ಚಿಗೆ ಇರುತ್ತದೆ.<br><br>ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ವರದಿಯನ್ನು ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರಕ್ಷಕ ಅಧೀಕ್ಷಕರನ್ನು ಕೋರಲಾಗಿದೆ. ವರದಿ ಬಂದ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು. |

ನಅಇ 388 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ



1 ನೇ ಪುಸ್ತಕದ 2750 ನೇ ದಸ್ತಾವೇಜಿನ 1/7 ನೇ ಪುಟ
2008-09
ಅ.ಉಪನೋ.ಬಿ.ಡಿ.ಎ

2750
2008-09
I

ಓಂ ಓಂ

## ಶುದ್ಧ ಕ್ರಯಪತ್ರ

ಸನ್ 2008 ನೇ ಇಸವಿ ನವೆಂಬರ್ ತಿಂಗಳು 14 ನೇ ದಿನಾಂಕದಂದು ಮೊದಲನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಮಾರಾಟಗಾರರು (ಮಾರಾಟಗಾರರು ಎಂಬ ಶಬ್ದವು ಅವರ ಉತ್ತರಾಧಿಕಾರಿಗಳು, ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇದನ್ನು ಪ್ರತಿನಿಧಿಸುವ ಅದರ ಉಪಕಾರ್ಯದರ್ಶಿಯವರು ಎರಡನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಖರೀದಿದಾರ (ಖರೀದಿದಾರ ಎಂಬ ಶಬ್ದವು ಆಕೆಯ ವಾರಸುದಾರರು, ಉತ್ತರಾಧಿಕಾರಿಗಳು ಮತ್ತು ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ **ನಂ. 75, ಶಂಭುನಾಥ್ ಕಾಲೋನಿ, ಬನಶಂಕರಿ 3 ನೇ ಹಂತ, ಬೆಂಗಳೂರು-560 085** ಎಂಬಲ್ಲಿ ವಾಸವಾಗಿರುವ **ದಿವಂಗತ ಎ. ಚಂದ್ರಶೇಖರ್** ಎಂಬುವವರ **ಹೆಂಡತಿಯಾದ** ಸುಮಾರು 45 ವರ್ಷ ವಯಸ್ಸಿನ **ಶ್ರೀಮತಿ ಎನ್. ಅಂಜಲಿ** ಎಂಬುವವರಿಗೆ ಬರೆದು ಕೊಟ್ಟ ಶುದ್ಧ ಕ್ರಯಪತ್ರದ ಕ್ರಮವೇನೆಂದರೆ:-

N Anjali

14/11/08
ಉಪ ಕಾರ್ಯದರ್ಶಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು-20

1ನೇ ಪುಸ್ತಕದ ೩೭೫೦ ನೇ ದಸ್ತಾವೇಜಿನ 6/7 ನೇ ಪುಟ
2008-09
ಹಿ.ಉ.ನೋ.ಬಿ.ಡಿ.ಎ

ಕರ್ನಾಟಕ ಸರ್ಕಾರ
ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Department of Stamps and Registration

ಪ್ರಮಾಣ ಪತ್ರ

1957 ರ ಕರ್ನಾಟಕ ಮುದ್ರಾಂಕ ಕಾಯ್ದೆಯ ಕಲಂ 10 ಎ ಅಡಿಯಲ್ಲಿಯ ಪ್ರಮಾಣ ಪತ್ರ

ಶ್ರೀಮತಿ ಎನ್. ಅಂಜಲಿ W/o ದಿವಂಗತ ಎ. ಚಂದ್ರಶೇಖರ್ , ಇವರು 460.00 ರೂಪಾಯಿಗಳಷ್ಟು ನಿಗದಿತ ಮುದ್ರಾಂಕ ಶುಲ್ಕವಾಗಿ ಪಾವತಿಸಿರುವದನ್ನು ದೃಢೀಕರಿಸಲಾಗಿದೆ

| ಪ್ರಕಾರ | ಮೊತ್ತ (ರೂ.) | ಹಣದ ಪಾವತಿಯ ವಿವರ |
|---|---|---|
| ಇತರ ಬ್ಯಾಂಕ್ ಡಿ.ಡಿ. | 250.00 | ಡಿಡಿ ನಂ. 870279, ದಿ. 19/09/08, ಕೆನರಾ ಬ್ಯಾಂಕ್, ಬೆಂಗಳೂರು-20. |
| ನಗದು ರೂಪ | 210.00 | ನಗದು ಪಾವತಿ. |
| ಒಟ್ಟು : | 460.00 | |


ಸ್ಥಳ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ದಿನಾಂಕ : 14/11/2008

ಅಧಿಕ ಜಿಲ್ಲಾ ನೋಂದಣಾಧಿಕಾರಿ
Additional District Registrar
ಬೆಂಗಳೂರು ನಗರ ಜಿಲ್ಲೆ
(ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ)

Designed and Developed by C-DAC ACTS Pune.

Only For Information





1ನೇ ಪುಸ್ತಕದ ೨೧೫೦ ನೇ ದಸ್ತಾವೇಜಿನ ೫/೯ ನೇ ಪುಟ.
200೮-0೯
ಅ.ಜಿ.ನೋ.ಬಿ.ಡಿ.ಎ

ಈಗ ದಸ್ತಾವೇಜಿನ ಕ್ರಮ ಹೀಗಿದೆ : ಮಾರಾಟಗಾರರು ನಿವೇಶನದ ಮೌಲ್ಯವಾದ ರೂ. 2,540/- (ರೂಪಾಯಿ ಎರಡು ಸಾವಿರದ ಐದು ನೂರ ನಲವತ್ತು ಮಾತ್ರ) ಗಳನ್ನು ಪಡೆದುಕೊಂಡು ಷೆಡ್ಯೂಲ್ ನಿವೇಶನದ ವಾಸ್ತವಿಕ ಸ್ವಾಧೀನತೆಯನ್ನು ಹಾಗೂ ಅದರ ಪೂರ್ಣ ಅಧಿಕಾರ, ಹಕ್ಕು ಮತ್ತು ಹಿತಾಸಕ್ತಿಯನ್ನು ಖರೀದಿದಾರರಿಗೆ ಈ ಮೂಲಕ ವಹಿಸಿ ಕೊಟ್ಟಿದ್ದಾರೆ. ಖರೀದಿದಾರರು ಎಲ್ಲಾ ಋಣಭಾರಗಳಿಂದ ಮುಕ್ತವಾದ ಷೆಡ್ಯೂಲ್ ಸ್ವತ್ತನ್ನು ತಮ್ಮ ಸ್ವಂತ ಮತ್ತು ಪರಿಪೂರ್ಣ ಸ್ವಾಮ್ಯಕ್ಕೆ ಒಳಪಟ್ಟ ಸ್ವತ್ತು ಎಂಬುದಾಗಿ ವಂಶಪಾರಂಪರ್ಯವಾಗಿ ಸುಖದಿಂದ ಅನುಭವಿಸಿಕೊಂಡು ಹೋಗತಕ್ಕದ್ದು.

Only For Information

14/11/08
ಉಪ ಕಾರ್ಯದರ್ಶಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು-20

-NAnjali

...4/-

ಗುರುತಿಸುವವರು

1 ನೇ ಪುಸ್ತಕದ 2750 ನೇ ದಸ್ತಾವೇಜಿನ 4/7 ನೇ ಪುಟ
2008-09

ಉ.ಜಿ.ನೋಂ.ಬಿ.ಡಿ.ಎ

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಸಹಿ |
|---|---|---|
| 1 | ಎಸ್. ಸುಬ್ರಮಣಿಯನ್<br>ನಂ. 187, 12ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, ಡಾಲರ್ಸ್ ಕಾಲೋನಿ, ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು. | (signature) |
| 2 | ವಿಶ್ವನಾಥ್ ಎಂ. ಕೊಟಾಟಿ<br>ಕೆ.ಎಲ್.ಇ. ಕಾಲೇಜ್ ಆಫ್ ಫಾರ್ಮಸಿ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10. | (signature) |

14/11/08
ಅಧಿಕ ಜಿಲ್ಲಾ ನೋಂದಣಾಧಿಕಾರಿ
Additional District Registrar
ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಖ್ಯೆ : ಬೆಂ. ಅ.ಪ್ರಾ /ಆಪಿ/75/2008-09 ದಿನಾಂಕ 14/11/08

1 ನೇ ಪುಸ್ತಕದ ದಸ್ತಾವೇಜು
ನಂಬರ BDA-1-02750-2008-09 ಆಗಿ
ಸಿ.ಡಿ. ನಂಬರ BDAD145 ನೇ ದ್ದರಲ್ಲಿ
ದಿನಾಂಕ 14-11-2008 ರಂದು ನೋಂದಾಯಿಸಲಾಗಿದೆ

ಸಹಿ (ಉಪನೋಂದಣಿ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ)
ಅಧಿಕ ಜಿಲ್ಲಾ ನೋಂದಣಾಧಿಕಾರಿ
ಬೆಂಗಳೂರು ನಗರ ಜಿಲ್ಲೆ

Designed and Developed by C-DAC, ACTS, Pune

ಅಧಿಕ ಜಿಲ್ಲಾ ನೋಂದಣಾಧಿಕಾರಿ ಯೂನಿಟ್-1 ಬೆಂಗಳೂರು

Information

I ನೇ ಪುಸ್ತಕದ 2150 ನೇ ದಸ್ತಾವೇಜಿನ 7 ನೇ ಪುಟ.
2008-09



ಅ.ಜಿ.ನೋ.ಬಿ.ಡಿ.ಎ

ಮಾರಾಟಗಾರರು ಕೆಳಕಂಡ ಷೆಡ್ಯೂಲ್‌ನಲ್ಲಿ ಪೂರ್ಣವಾಗಿ ವಿವರಿಸಿರುವಂತೆ ಬನಶಂಕರಿ ಬಡಾವಣೆಯ 3 (ಮೂರು) ನೇ ಹಂತ, ಮಂಜುನಾಥ ಸ್ಲಂನಲ್ಲಿರುವ 75 (ಎಪ್ಪತ್ತೈದು) ನೇ ಸಂಖ್ಯೆಯ ನಿವೇಶನವನ್ನು ಬೆಂ.ಅ.ಪ್ರಾ/ಆಡಳಿತ/ಉಕಾ-2/75/ಬಿ.ಎಸ್.ಕೆ-3/ಮಂಜುನಾಥ ಸ್ಲಂ/01-02, ದಿನಾಂಕ 01.04.2002 ಹಂಚಿಕೆ ಪತ್ರದ ಮೂಲಕ ಬೆಂ.ಅ.ಪ್ರಾ (ನಿವೇಶನಗಳ ಹಂಚಿಕೆ) ನಿಯಮಗಳು 1984 ರ ಷರತ್ತಿಗೊಳಪಡಿಸಿ ಖರೀದಿದಾರರಿಗೆ ಹಂಚಿಕೆ ಮಾಡಿದ್ದಾರೆ. ದಿನಾಂಕ 20.08.1984 ರ ಸುತ್ತೋಲೆ ಸಂಖ್ಯೆ ಆವಿ/ಕಾವಿ/920/1984-85 ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಹಾಗೂ ದಿನಾಂಕ 21.08.1995 ರ ಆಯುಕ್ತರ ಟಿಪ್ಪಣಿ ಸಂಖ್ಯೆ ಬೆಂ.ಅ.ಪ್ರಾ/ಆ/205/1995-96 ರನ್ವಯ, ದಿನಾಂಕ 01.04.2002 ರಲ್ಲಿ ಶ್ರೀ ಎ. ಚಂದ್ರಶೇಖರ್ ರವರ ಹೆಸರಿಗೆ ಮೂಲವಾಗಿ ಹಂಚಿಕೆಯಾಗಿರುವ ಬನಶಂಕರಿ 3 ನೇ ಹಂತ, ಮಂಜುನಾಥ ಕಾಲೋನಿ ಕೊಳಚೆ ಪ್ರದೇಶ ಬಡಾವಣೆ 6.18 X 3.04 ಮೀಟರ್ ಅಳತೆಯ ನಿವೇಶನ ಸಂಖ್ಯೆ 75 ಅನ್ನು ಮೂಲ ಹಂಚಿಕೆದಾರರು ಮರಣ ಹೊಂದಿರುವುದರಿಂದ, ದಿವಂಗತ ಹಂಚಿಕೆದಾರರಾದ ಎ. ಚಂದ್ರಶೇಖರ್ ರವರ ಹೆಸರಿನಿಂದ ಅವರ ಪತ್ನಿ ಶ್ರೀಮತಿ ಎನ್. ಅಂಜಲಿ ರವರ ಹೆಸರಿಗೆ ನಿಗದಿತ ವರ್ಗಾವಣೆ ಶುಲ್ಕವನ್ನು ಪಾವತಿಸಿಕೊಳ್ಳುವ ಹಾಗೂ ಇತರೆ ಯಾವುದೇ ವಾರಸುದಾರರ ನಾಗರೀಕ ಹಕ್ಕು, ಬಾಧ್ಯತೆಗೆ ಚ್ಯುತಿ ಬಾರದಂತೆ ಎಂಬ ಷರತ್ತಿನೊಂದಿಗೆ ವರ್ಗಾಯಿಸಲು ಆದೇಶಿಸಿದೆ.

ಖರೀದಿದಾರರು ನಿವೇಶನದ ಮೌಲ್ಯವಾದ ರೂ. 2,540/- (ರೂಪಾಯಿ ಎರಡು ಸಾವಿರದ ಐದು ನೂರ ನಲವತ್ತು ಮಾತ್ರ) ಗಳನ್ನು ನಗದಾಗಿ ಕೆನರಾ ಬ್ಯಾಂಕ್, ಬಿಡಿಎ ವಿಸ್ತರಣಾ ಶಾಖೆ, ಕುಮಾರ ಪಾರ್ಕ್ ಪಶ್ಚಿಮ ಶಾಖೆ, ಬೆಂಗಳೂರು-560 020 ಮೂಲಕ ಸಂದಾಯ ಮಾಡಿದ್ದು ಅದನ್ನು ಸ್ವೀಕರಿಸಿದ ಬಗ್ಗೆ ಮಾರಾಟಗಾರರು ಸ್ವೀಕೃತಿ ನೀಡಿದ್ದಾರೆ.

—NAnjali

ಉಪ ಕಾರ್ಯದರ್ಶಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು-20

...3/-

1 ನೇ ಪುಸ್ತಕದ 2750 ನೇ ದಸ್ತಾವೇಜಿನ 2/7 ನೇ ಪುಟ

Print Date & Time : 14-11-2008 01:22:44 PM 2008-09


ಅ.ಜಿ.ನೋ.ಬಿ.ಡಿ.ಎ

ದಸ್ತಾವೇಜು ಸಂಖ್ಯೆ : 2750

Additional District Registrar ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಕಚೇರಿಯಲ್ಲಿ ದಿನಾಂಕ 14-11-2008 ರಂದು 01:11:46 PM ಗಂಟೆಗೆ ಈ ಕೆಳಗೆ ವಿವರಿಸಿದ ಶುಲ್ಕದೊಂದಿಗೆ

| ಕ್ರಮ ಸಂಖ್ಯೆ | ವಿವರ | ರೂ. ಪೈ |
|---|---|---|
| 1 | ನೋಂದಣಿ ಶುಲ್ಕ | 130.00 |
| 2 | ಸ್ಕ್ಯಾನಿಂಗ್ ಫೀ | 210.00 |
| 3 | ಜ್ಞಾಪನಾ ಪತ್ರದ ನಕಲು | 50.00 |
| | ಒಟ್ಟು : | 390.00 |


ಶ್ರೀಮತಿ ಎನ್. ಅಂಜಲಿ W/o ದಿವಂಗತ ಎ. ಚಂದ್ರಶೇಖರ್ ಇವರಿಂದ ಹಾಜರು ಮಾಡಲ್ಪಟ್ಟಿದೆ

| ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|
| ಶ್ರೀಮತಿ ಎನ್. ಅಂಜಲಿ W/o ದಿವಂಗತ ಎ. ಚಂದ್ರಶೇಖರ್ |  |  | N Anjali |

Only Information

ಅಧಿಕ ಜಿಲ್ಲಾ ನೋಂದಣಾಧಿಕಾರಿ
Additional District Registrar
ಬೆಂಗಳೂರು ನಗರ ಜಿಲ್ಲೆ


ಬರೆದುಕೊಟ್ಟಿದ್ದಾಗಿ ಒಪ್ಪಿರುತ್ತಾರೆ

| ಕ್ರಮ ಸಂಖ್ಯೆ | ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|---|
| 1 | ಎನ್. ಅಂಜಲಿ W/o ದಿವಂಗತ ಎ. ಚಂದ್ರಶೇಖರ್ . (ಬರೆಸಿಕೊಂಡವರು) |  |  | NAnjali |
| 2 | ಉಪಕಾರ್ಯದರ್ಶಿ-2. ಬಿಡಿಎ ಪರವಾಗಿ ಸೂರಶೆಟ್ಟಿ (ಪ್ರತಿನಿಧಿ) . (ಬರೆದುಕೊಡುವವರು) |  |  | [illegible] |

ಅಧಿಕ ಜಿಲ್ಲಾ ನೋಂದಣಾಧಿಕಾರಿ
Additional District Registrar
ಬೆಂಗಳೂರು ನಗರ ಜಿಲ್ಲೆ

ರಜಿಸ್ಟ್ರೇಷನ್ ಕಾಯ್ದೆ ಕಲಂ 88(I) ಪ್ರಕಾರ ಹಾಜರಾಗಲು ವಿನಾಯ್ತಿಯಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪರವಾಗಿ ಉಪಕಾರ್ಯದರ್ಶಿ-2 . ಇವರು ದಸ್ತಾವೇಜನ್ನು ಬರೆದುಕೊಟ್ಟಿರುವುದನ್ನು ನಾನು ಒಪ್ಪಿರುತ್ತೇನೆ.

ಅಧಿಕ ಜಿಲ್ಲಾ ನೋಂದಣಾಧಿಕಾರಿ
ಬೆಂಗಳೂರು ನಗರ ಜಿಲ್ಲೆ



1ನೇ ಪುಸ್ತಕದ [illegible] ನೇ ದಸ್ತಾವೇಜಿನ 7 ನೇ ಪುಟ

-4- 2008-09

ಷೆಡ್ಯೂಲ್ ಅ.ಜಿ.ಸ.ಕೆ.ಬಿ.ಡಿ.ಎ

ಬನಶಂಕರಿ ಬಡಾವಣೆಯ 3 (ಎರಡು) ನೇ ಹಂತ, ಮಂಜುನಾಥ ಕಾಲೋನಿ ಪ್ಲಾನಿನಲ್ಲಿರುವ 75 (ಎಪ್ಪತ್ತೈದು) ನೇ ಸಂಖ್ಯೆಯುಳ್ಳ ಪೂರ್ವ-ಪಶ್ಚಿಮ 5.18 (ಐದು ಪಾಯಿಂಟ್) ಮೀಟರ್‌ಗಳು, ಉತ್ತರ-ದಕ್ಷಿಣ 3.04 (ಮೂರು ಪಾಯಿಂಟ್ ಸೊನ್ನೆ ನಾಲ್ಕು) ಮೀಟರ್‌ಗಳು, ಒಟ್ಟು 15.74 (ಹದಿನೈದು ಪಾಯಿಂಟ್ ಏಳು ನಾಲ್ಕು) ಚದರ ಮೀಟರ್‌ಗಳ ವಿಸ್ತೀರ್ಣವುಳ್ಳ ನಿವೇಶನವನ್ನು ಮತ್ತು ಭೂಮೇಲ್ಮೈನ ಕೆಳಭಾಗಕ್ಕೆ ಅಥವಾ ಮೇಲ್ಭಾಗಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಸಕಲ ಹಕ್ಕುಗಳನ್ನು, ಉಪಹಕ್ಕುಗಳನ್ನು ಕಾರ್ಯದರ್ಶಿಗಳ ಆದೇಶದ ಸಂಖ್ಯೆ 2241 ದಿನಾಂಕ 12.06.2008 ರ ಪ್ರಕಾರ ದಿವಂಗತ ಹಂಚಿಕೆದಾರರಿಂದ ಇವರ ಪತ್ನಿ ಶ್ರೀಮತಿ ಎಸ್. ಅಂಜಲಿ ರವರ ಹೆಸರಿಗೆ ವರ್ಗಾಯಿಸಿದ ಒಳಗೊಂಡ ಸ್ವತ್ತಿಗೆ ಚಕ್ಕುಬಂದಿ.

| | | |
|---|---|---|
| ಪೂರ್ವಕ್ಕೆ | : | ಪ್ಲಾಂ ನಿವೇಶನ. |
| ಪಶ್ಚಿಮಕ್ಕೆ | : | ರಸ್ತೆ |
| ಉತ್ತರಕ್ಕೆ | : | ನಿವೇಶನ ಸಂಖ್ಯೆ 76 (ಎಪ್ಪತ್ತಾರು). |
| ದಕ್ಷಿಣಕ್ಕೆ | : | ನಿವೇಶನ ಸಂಖ್ಯೆ 74 (ಎಪ್ಪತ್ತ ನಾಲ್ಕು). |

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಬೆಂಗಳೂರಿನಲ್ಲಿ ಮೇಲೆ ತಿಳಿಸಿದ ದಿನಾಂಕ, ತಿಂಗಳು, ವರ್ಷದಂದು ತಮ್ಮ ಸಹಿಯನ್ನು ಹಾಕಿರುತ್ತಾರೆ.

Only for Information

-NAnjali

ಸಾಕ್ಷಿದಾರರು:

1) [signature]

2) J. G. Rajamohan [signature]

[signature] 16/10/08
ಉಪ ಕಾರ್ಯದರ್ಶಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.